ಎಚ್ ಡಿ ಎಫ್ ಸಿ ಬ್ಯಾಂಕ್

SECURE BANKING




## ಯಾರೊಂದಿಗೂ ಹಂಚಿಕೊಳ್ಳದಿರಿ

ಓಟಿಪಿ • ಕಾರ್ಡ್ ನಂಬರ್ • ಯುಪಿಐ ಪಿನ್ • ಬ್ಯಾಂಕ್ ವಿವರ

ಕಸ್ಟಮರ್ ಐಡಿ ಮತ್ತು ಪಾಸ್‌ವರ್ಡ್

## ಫಿಶಿಂಗ್ ಹಾಗೂ ಸ್ಮಿಶಿಂಗ್ ಲಿಂಕ್ಸ್

### ವಂಚನೆಗಳು



- ಬೇರೆ ಬೇರೆ ಪ್ಲ್ಯಾಟ್‌ಫಾರ್ಮ್‌ಗಳ ಮೂಲಕ ಫಿಶಿಂಗ್ ಲಿಂಕ್ಸ್ ರವಾನಿಸಲು ಥರ್ಡ್ ಪಾರ್ಟಿ ವೆಬ್‌ಸೈಟ್‌ಗಳನ್ನು ಹುಟ್ಟುಹಾಕ್ತಾರೆ.
- ಲಿಂಕ್ ನಿಮ್ಮನ್ನು ನಕಲಿ ವೆಬ್‌ಸೈಟ್‌ಗೆ ಲಿಂಕ್ ಮಾಡುತ್ತೆ. ಅಲ್ಲಿ ನಿಮ್ಮ ಬ್ಯಾಂಕ್ ವಿವರ ದಾಖಲಿಸಲು ತಿಳಿಸುತ್ತೆ. ಹಾಗೆ ಮಾಡಿದರೆ ವಂಚಕರಿಗೆ ನಿಮ್ಮ ಬ್ಯಾಂಕ್ ಖಾತೆ ಬಳಸಲು ದಾರಿ ಮಾಡಿಕೊಟ್ಟಂತಾಗುತ್ತದೆ.

### ಭದ್ರತಾ ಸೂಚನೆಗಳು



- ನೆನಪಿಡಿ, ಎಚ್‌ಡಿಎಫ್‌ಸಿ ಬ್ಯಾಂಕ್ ಉದ್ಯೋಗಿಗಳು ಎಂದೂ ನಿಮ್ಮ ರುಜುವಾತು ಕೇಳುವುದಿಲ್ಲ, ಅನುಮಾನ ಉಂಟಾದರೆ ನಿಮ್ಮ ಕಾರ್ಡ್ ಬ್ಲಾಕ್ ಮಾಡಲು ಶಿಫಾರಸು ಮಾಡ್ತಾರೆ.

## ವಂಚನೆಯ ಅಪಾಯದ ಕರೆಗಳು

### ವಂಚನೆಗಳು



- ವಂಚಕರು ಬ್ಯಾಂಕ್ ಉದ್ಯೋಗಿಗಳೆಂದು ಕರೆ ಮಾಡುತ್ತಾರೆ. ಜನರ ವಿಶ್ವಾಸ ಗಳಿಸಲು ಒತ್ತಡದ ವಿಷಯವೆಂಬಂತೆ ನಟಿಸುತ್ತಾರೆ.
- ವಂಚಕರು ನಿಮ್ಮ ವಿಶ್ವಾಸ ಗಳಿಸಿದ ನಂತರ ನಿಮಗೆ ಸಹಾಯ ಮಾಡುವವರಂತೆ ನಟಿಸಿ ನಿಮ್ಮ ಬ್ಯಾಂಕ್ ವಿವರ ಪಡೆಯಲು ಪ್ರಯತ್ನಿಸುತ್ತಾರೆ. ಕೇವಲ ನಿಮ್ಮನ್ನು ವಂಚಿಸಲು.

### ಭದ್ರತಾ ಸೂಚನೆಗಳು



- ನೆನಪಿಡಿ, ಎಚ್‌ಡಿಎಫ್‌ಸಿ ಬ್ಯಾಂಕ್ ಉದ್ಯೋಗಿಗಳು ಎಂದೂ ನಿಮ್ಮ ರುಜುವಾತು ಕೇಳುವುದಿಲ್ಲ, ವಂಚನೆಗಳ ಅಪಾಯ ತಪ್ಪಿಸುವ ಸಲುವಾಗಿ ನಿಮ್ಮ ಕಾರ್ಡ್ ಬ್ಲಾಕ್ ಮಾಡಲು ಮತ್ತು ಪಾಸ್‌ವರ್ಡ್ ಆಗಾಗ್ಗೆ ಬದಲಾಯಿಸಲು ಶಿಫಾರಸು ಮಾಡುತ್ತೇವೆ.

## ಆನ್‌ಲೈನ್ ಮಾರಾಟದ ಪ್ಲ್ಯಾಟ್‌ಫಾರ್ಮ್‌ಗಳನ್ನು ಬಳಸಿಕೊಂಡು ಮಾಡುವ ವಂಚನೆಗಳು

### ವಂಚನೆಗಳು



- ವಂಚಕರು ಆನ್‌ಲೈನ್ ಮಾರಾಟದ ವೇದಿಕೆಯಲ್ಲಿ ಖರೀದಿದಾರರಂತೆ ನಟಿಸುತ್ತಾರೆ. ನಿಮ್ಮ ಪ್ರಾಡಕ್ಟ್ ಬಗ್ಗೆ ಆಸಕ್ತಿ ತೋರಿಸ್ತಾರೆ.
- ಹಣದ ಬದಲು ಯುಪಿಐ ಆ್ಯಪ್ಸ್ ಮೂಲಕ ಪಾವತಿಸಲು ವಿನಂತಿಸ್ತಾರೆ ಮತ್ತು ನಿಮ್ಮ ಖಾತೆಯಿಂದ ಹಣ ವಿಡ್ರಾ ಮಾಡಲು ಅನುಮೋದಿಸುವಂತೆ ಒತ್ತಾಯಿಸುತ್ತಾರೆ.

### ಭದ್ರತಾ ಸೂಚನೆಗಳು



- ವಂಚನೆಯ ಅನುಮಾನ ಬಂದರೆ, ಅನಧಿಕೃತ ವಹಿವಾಟಿನ ಕುರಿತು ತಕ್ಷಣ ನಿಮ್ಮ ಬ್ಯಾಂಕ್‌ಗೆ ರಿಪೋರ್ಟ್ ಮಾಡಿ ಮತ್ತು ನಿಮ್ಮ ದೂರು ದಾಖಲಿಸಲು ರಾಷ್ಟ್ರೀಯ ಸೈಬರ್ ಅಪರಾಧ ಸಹಾಯವಾಣಿ ಸಂಖ್ಯೆ 155260ಗೆ ಕರೆ ಮಾಡಿ.

## ನಕಲಿ ಸಹಾಯವಾಣಿಗಳು ಹಾಗೂ ಸ್ಕ್ರೀನ್ ಹಂಚಿಕೆ ಆ್ಯಪ್‌ಗಳು

### ವಂಚನೆಗಳು



- ಗ್ರಾಹಕರು ಬಿಸಿನೆಸ್‌ಗಾಗಿ ಆನ್‌ಲೈನ್‌ನಲ್ಲಿ ಹೆಲ್ಪ್‌ಲೈನ್ ನಂಬರ್‌ಗಳನ್ನು ಹುಡುಕ್ತಿರ್ತಾರೆ. ಕರೆ ಮಾಡಲು ಗ್ರಾಹಕರನ್ನು ಪ್ರೋತ್ಸಾಹಿಸುವ ಸ್ಕ್ಯಾಮರ್‌ಶೆನ್ಸ್‌ನಿಂದ ಆ ಸಂಖ್ಯೆಗಳನ್ನು ಬದಲಾಯಿಸುತ್ತಾರೆ.
- ವಂಚಕರು ಬ್ಯಾಂಕ್ ಎಕ್ಸಿಕ್ಯೂಟಿವ್ ಥರ ನಟಿಸುತ್ತಾರೆ ಮತ್ತು ಆ್ಯಪ್ಸ್ ಡೌನ್‌ಲೋಡ್ ಮಾಡಲು, ನಿಮ್ಮ ಸ್ಕ್ರೀನ್ ಶೇರ್ ಮಾಡಲು ಅಥವಾ ಪರಿಶೀಲನೆಗಾಗಿ ಕಾರ್ಡ್ ವಿವರ ಕೇಳುವ ಮೂಲಕ ನಿಮ್ಮ ಡಿವೈಸನ್ನು ಪ್ರವೇಶಿಸುತ್ತಾರೆ.
- ಅವರು ಅಸಲಿ ಜನಗಳೆಂದು ಭಾವಿಸಿ, ನಾವು ನಮ್ಮ ಸುರಕ್ಷಿತ ವಿವರಗಳನ್ನು ಬಚ್ಚಿಡುವ ಬದಲು ಬಿಚ್ಚಿಡುತ್ತೇವೆ.

### ಭದ್ರತಾ ಸೂಚನೆಗಳು



- ನೆನಪಿಡಿ, ಎಚ್‌ಡಿಎಫ್‌ಸಿ ಬ್ಯಾಂಕ್ ಉದ್ಯೋಗಿಗಳು ಎಂದೂ ನಿಮ್ಮ ರುಜುವಾತು ಕೇಳುವುದಿಲ್ಲ.
- ಯಾವತ್ತೂ ಆ್ಯಪ್ಸ್ ಡೌನ್‌ಲೋಡ್ ಅಥವಾ ಅಪರಿಚಿತರೊಂದಿಗೆ ಸ್ಕ್ರೀನ್ ಶೇರಿಂಗ್ ಮಾಡಲೇಬೇಡಿ.

## ಸಾಮಾಜಿಕ ಮಾಧ್ಯಮದ ಮೂಲಕ ನಂಬಿಸಲು ಪ್ರಯತ್ನಿಸುವುದು

### ವಂಚನೆಗಳು



- ವಂಚಕರು ಪ್ರಸಿದ್ಧ ಸಾಮಾಜಿಕ ಮೀಡಿಯಾ ವೇದಿಕೆಯ ಮೂಲಕ ಫೋನಿ ಖಾತೆಗಳನ್ನು ಸ್ಥಾಪಿಸಿ ಮೆಡಿಕಲ್ ಬಿಲ್ಸ್ ಅಥವಾ ಪೇಮೆಂಟ್‌ಗಾಗಿ ಹಣ ಕೇಳುತ್ತಾರೆ.
- ಕ್ರಮೇಣ ಅವರು ನಿಮ್ಮ ವಿಶ್ವಾಸ ಗಳಿಸುತ್ತಾರೆ, ನಂತರ ನಿಮ್ಮನ್ನು ಬ್ಲ್ಯಾಕ್‌ಮೇಲ್ ಮತ್ತು ಹಣ ಸುಲಿಗೆ ಮಾಡಲು ನಿಮ್ಮ ಖಾಸಗಿ ಮಾಹಿತಿ ಬಳಸುತ್ತಾರೆ.

### ಭದ್ರತಾ ಸೂಚನೆಗಳು



- ಆನ್‌ಲೈನ್ ಖಾತೆಯ ಅಸಲಿಯತ್ತನ್ನು ಪರಿಶೀಲಿಸಲು ಯಾವತ್ತೂ ಮರೆಯದಿರಿ. ನಿಮ್ಮ ಗೌಪ್ಯ ಮಾಹಿತಿ ಕೇಳಿದರೆ ಅವರನ್ನು ನಂಬಬೇಡಿ.
- ನಿಮ್ಮ ದೂರು ದಾಖಲಿಸಲು ರಾಷ್ಟ್ರೀಯ ಸೈಬರ್ ಅಪರಾಧ ಸಹಾಯವಾಣಿ ಸಂಖ್ಯೆ 155260ಗೆ ಕರೆ ಮಾಡಿ.

## ಲಾಟರಿ ವಂಚನೆ

### ವಂಚನೆಗಳು



- ನಿಮಗೆ ಲಾಟರಿ ಹೊಡೆದಿದೆ ಅಂತ ವಂಚಕರು ನಿಮಗೆ ಕರೆ ಅಥವಾ ಇ-ಮೇಲ್ ಮಾಡಬಹುದು. ಹಣ ಕಳಿಸುತ್ತೇವೆ ನಿಮ್ಮ ಬ್ಯಾಂಕ್ ಖಾತೆ ಅಥವಾ ಕ್ರೆಡಿಟ್ ಕಾರ್ಡ್ ಮೂಲಕ ನಿಮ್ಮ ಗುರುತು ಪರಿಶೀಲಿಸಲು ಡೇಟಾ ಸಂಗ್ರಹಣೆಯ ಅವರ ವೆಬ್‌ಸೈಟ್‌ನಲ್ಲಿ ಎಲ್ಲ ವಿವರ ಕೇಳ್ತಾರೆ.
- ನಂತರ ಅವರು ಲಾಟರಿ/ಸರಕುಗಳ ಪ್ರಕ್ರಿಯೆಗೆಂದು ಶಿಪ್ಪಿಂಗ್ ಶುಲ್ಕಗಳು ಮತ್ತು ಇತರ ಶುಲ್ಕಗಳನ್ನು ಮುಂಗಡವಾಗಿ ಪಾವತಿಸಲು ಒತ್ತಾಯಿಸುತ್ತಾರೆ.

### ಭದ್ರತಾ ಸೂಚನೆಗಳು



- ನೆನಪಿಡಿ, ಲಾಟರಿ ಸಂಬಂಧಿತ ಕರೆ/ಎಸ್‌ಎಮ್‌ಎಸ್/ಇಮೇಲ್‌ಗಳಿಗೆ ಪ್ರತಿಕ್ರಿಯಿಸಬೇಡಿ.
- ಅನಾನುಕೂಲತೆ ಅಥವಾ ಅನುಮಾನದ ಸಂದರ್ಭ ತಪ್ಪಿಸಲು ನಿಮ್ಮ ಬ್ಯಾಂಕ್ ಅಥವಾ ಕ್ರೆಡಿಟ್ ಕಾರ್ಡ್ ವಿತರಕರಿಗೆ ಸೂಚಿಸಿ.

## ಸೇವೆಗಳನ್ನು ವಿಸ್ತರಿಸುವ ವಂಚಕರ ನಕಲಿ ಜಾಹೀರಾತುಗಳು

### ವಂಚನೆಗಳು



- ವಂಚಕರು ಗ್ರಾಹಕರನ್ನು ಸೆಳೆಯಲು ಆಕರ್ಷಕ ಪ್ರಯೋಜನಗಳೊಂದಿಗೆ ಬ್ಯಾಂಕಿಂಗ್ ಸೇವೆಗಳಿಗಾಗಿ ನಕಲಿ ಜಾಹೀರಾತು ರೂಪಿಸುತ್ತಾರೆ.
- ಈ ಇಮೇಲ್ ಐಡಿಗಳು ಸಾಮಾನ್ಯವಾಗಿ ಗ್ರಾಹಕರ ನಡುವೆ ವಿಶ್ವಾಸವನ್ನು ನಿರ್ಮಿಸಲು ಬಳಸುವ ಬ್ಯಾಂಕ್ ಎಕ್ಸಿಕ್ಯುಟಿವ್‌ಗಳ ಪುನರಾವರ್ತಿಸಲಾದ ಇಮೇಲ್ ಐಡಿಗಳು.
- ಈ ಸೇವೆಗಳಿಗಾಗಿ ನೀವು ವಂಚಕರನ್ನು ಸಂಪರ್ಕಿಸಿದಾಗ ಪ್ರೊಸೆಸಿಂಗ್ ಶುಲ್ಕ, ಅಪ್ಲಿಕೇಶನ್ ಶುಲ್ಕ ಮುಂತಾದ ಅಂಥ ಮುಂಗಡ ಶುಲ್ಕ ಕೇಳುತ್ತಾರೆ ಮತ್ತು ಹಣ ಕೊಡದೆ ಕಣ್ಮರೆಯಾಗ್ತಾರೆ.

### ಭದ್ರತಾ ಸೂಚನೆಗಳು



- ನೆನಪಿಡಿ, ಅಂಥ ಸಂಭಾಷಣೆಗಳಿಗೆ ಸ್ಪಂದಿಸಬೇಡಿ, ಬ್ಯಾಕಿಂಗ್ ಸೇವೆ ಪಡೆಯಲು ನಿಮ್ಮ ರಿಲೇಶನ್‌ಶಿಪ್ ಮೆನೇಜರ್‌ರನ್ನು ಸಂಪರ್ಕಿಸಿ.
- ಅನುಮಾನದ ಸಂದರ್ಭದಲ್ಲಿ ಹತ್ತು ಹಲವು ಪ್ರಶ್ನೆ ಕೇಳಿ ಎಂದು ನಾವು ಒತ್ತಾಯಿಸುತ್ತೇವೆ.

## ಆನ್‌ಲೈನ್ ಉದ್ಯೋಗ ವಂಚನೆಗಳು

### ವಂಚನೆಗಳು



- ಅಮಾಯಕ ಗ್ರಾಹಕರನ್ನು ಸೆಳೆಯಲು ವಂಚಕರು ನಕಲಿ ಉದ್ಯೋಗ ಹುಡುಕಾಟ ಪೋರ್ಟಲ್‌ಗಳನ್ನು ಅಭಿವೃದ್ಧಿಪಡಿಸುತ್ತಾರೆ.
- ಈ ವಂಚಕರು ಪ್ರತಿಷ್ಠಿತ ನಿಗಮಗಳಿಂದ ಅಧಿಕಾರಿಗಳನ್ನು ಅನುಕರಿಸುತ್ತಾರೆ, ನಂತರ ನಕಲಿ ಸಂದರ್ಶನ ನಡೆಸಿ ಆಯ್ಕೆಯನ್ನು ಖಚಿತ ಪಡಿಸುತ್ತಾರೆ. ಬಲಿಪಶು ಅಭ್ಯರ್ಥಿಗಳಿಂದ ಕಡ್ಡಾಯ ತರಬೇತಿ ಕಾರ್ಯಕ್ರಮ ಅಥವಾ ಅಪ್ಲಿಕೇಶನ್ ಶುಲ್ಕ ಪಾವತಿಸುವಂತೆ ಒತ್ತಾಯಿಸುತ್ತಾರೆ.

### ಭದ್ರತಾ ಸೂಚನೆಗಳು




- ಎಚ್‌ಡಿಎಫ್‌ಸಿ ಬ್ಯಾಂಕ್ ಯಾವತ್ತೂ ಪರಿಶೀಲಿಸಿದ ಜಾಬ್ ಪೋರ್ಟಲ್‌ಗಳನ್ನೇ ಬಳಸಬೇಕೆಂದು ವಿನಂತಿಸುತ್ತದೆ.
- ಅಪರಿಚಿತ ಕಂಪನಿಗಳ ಸಾರ್ವತ್ರಿಕ ಇಮೇಲ್‌ಗಳಿಗೆ ಪ್ರತಿಕ್ರಿಯಿಸಬೇಡಿ, ಮೋಸಹೋಗಬೇಡಿ.

## ಎಟಿಎಮ್ ಕಾರ್ಡ್ ಸ್ಕಿಮ್ಮಿಂಗ್

### ವಂಚನೆಗಳು



- ವಂಚಕರು ಹತ್ತಿರದ ಗ್ರಾಹಕರಂತೆ ವರ್ತಿಸಬಹುದು. ನೀವು ಪಿನ್ ಒತ್ತುವಾಗ ಅವರು ಅದನ್ನು ವಶಪಡಿಸಬಹುದು.
- ಆ ಮಾಹಿತಿಯನ್ನು ನಂತರ ನಕಲಿ ಕಾರ್ಡ್ ಮಾಡಲು, ಗ್ರಾಹಕರ ಖಾತೆಯಿಂದ ಹಣ ಲಪಟಾಯಿಸಲು ಬಳಸಿಕೊಳ್ಳಬಹುದು.

### ಭದ್ರತಾ ಸೂಚನೆಗಳು



- ಎಚ್‌ಡಿಎಫ್‌ಸಿ ಬ್ಯಾಂಕ್ ನೀವು ಎಟಿಎಮ್ ಬಳಸುವ ಮೊದಲು ಯಾವಾಗಲೂ ಅನುಮಾನಾಸ್ಪದ ಚಟುವಟಿಕೆ ಅಥವಾ ಅತ್ತಿತ್ತ ಸುಳಿದಾಡುವ ಜನರ ಮೇಲೆ ಗಮನ ಇಡಬೇಕೆಂದು ಒತ್ತಾಯಿಸುತ್ತದೆ.

## ಸಿಮ್ ಸ್ವ್ಯಾಪ್

### ವಂಚನೆಗಳು



- ನಿಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಯು ಖಾತೆಯ ಮಾಹಿತಿ ಮತ್ತು ದೃಢೀಕರಣಕ್ಕೆ ಲಿಂಕ್ ಆಗಿರುವುದರಿಂದ ವಂಚಕರು ನಿಮ್ಮ ಸಿಮ್ ಕಾರ್ಡ್ ಪ್ರವೇಶಿಸಲು ಅಥವಾ ನಕಲಿ ಸಿಮ್‌ನಲ್ಲಿ ಸ್ವೀಕರಿಸಿದ ಒಟಿಪಿ ಬಳಸಿಕೊಂಡು ಡಿಜಿಟಲ್ ವಹಿವಾಟುಗಳನ್ನು ನಡೆಸಲು ಅಂಥಾದ್ದೇ ಸಿಮ್ ಕಾರ್ಡ್ ಪಡೆಯಲು ಯತ್ನಿಸುತ್ತಾರೆ.
- ಅವರು ಸಾಮಾನ್ಯವಾಗಿ ನೆಟ್‌ವರ್ಕ್ ಕಂಪನಿಯಿಂದ ಫೋನ್ ಮಾಡುವಂತೆ ನಟಿಸಿ 3Gಯಿಂದ 4Gಗೆ ಉಚಿತ ಅಪ್‌ಗ್ರೇಡ್ ಅಥವಾ ಸಿಮ್ ಕಾರ್ಡ್‌ನಲ್ಲಿ ಬೋನಸ್ ವಿನಿಮಯದ ಮಾಹಿತಿಗಾಗಿ ಬೇಡಿಕೆ ಇರಿಸುತ್ತಾರೆ.

### ಭದ್ರತಾ ಸೂಚನೆಗಳು



- ಎಚ್‌ಡಿಎಫ್‌ಸಿ ಬ್ಯಾಂಕ್, ನಿಮ್ಮ ಫೋನಲ್ಲಿ ಸಾಕಷ್ಟು ಸಮಯದ ವರೆಗೆ ಮೊಬೈಲ್ ನೆಟ್‌ವರ್ಕ್ ಹೊಂದಿಲ್ಲದಿದ್ದರೆ ಅಂಥವರ ಮೇಲೆ ಅನುಮಾನದ ಒಂದು ನಿಗಾ ಇಡಬೇಕೆಂದು ವಿನಂತಿಸುತ್ತದೆ.
- ಯಾವುದೇ ನಕಲಿ ಸಿಮ್ ಕಾರ್ಯನಿರ್ವಹಿಸುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ನಿಮ್ಮ ಮೊಬೈಲ್ ಆಪರೇಟರನ್ನು ಸಂಪರ್ಕಿಸಿ.

## ನಕಲಿ ದಾಖಲೆಗಳ ಮೋಸದ ಲೋನುಗಳು

### ವಂಚನೆಗಳು



- ಹಣಕಾಸು ಸಂಸ್ಥೆಗಳಿಂದ ಯಾವುದೇ ರೀತಿಯ ಸೇವೆಗಳನ್ನು ಪಡೆಯಲು ವಂಚಕರು ನಕಲಿ ದಾಖಲೆಗಳನ್ನು ಬಳಸುತ್ತಾರೆ.
- ಎನ್‌ಬಿಎಫ್‌ಸಿ ಉದ್ಯೋಗಿಯ ದೃಢೀಕರಣವನ್ನು ಪರಿಶೀಲಿಸದೆ ಕೆವೈಸಿ ಸಂಬಂಧಿತ ದಾಖಲೆಗಳನ್ನು ಘಟಕಗಳೊಂದಿಗೆ ಹಂಚಿಕೊಳ್ಳುವಾಗ ಇಂತಹ ವಂಚನೆಗಳು ಸಂಭವಿಸಬಹುದು.
- ಹಣಕಾಸು ಸಂಸ್ಥೆಗಳಿಂದ ಪ್ರಯೋಜನ ಪಡೆಯಲು ಗುರುತಿನ ಕಾರ್ಡ್‌ಗಳು, ಬ್ಯಾಂಕ್ ಖಾತೆ ವಿವರಗಳು ಮುಂತಾದ ಮೋಸ ಹೋದವರ ವೈಯಕ್ತಿಕ ಮಾಹಿತಿ ಕದಿಯುವ ಮೂಲಕ ಗುರುತಿನ ಕಳ್ಳತನದ ಆಧಾರದ ಮೇಲೆ ವಂಚನೆ ಸಾಲಗಳೂ ಮಂಜೂರಾಗುತ್ತವೆ.

### ಭದ್ರತಾ ಸೂಚನೆಗಳು



- ನಿಮ್ಮ ರುಜುವಾತು ಹಂಚಿಕೊಳ್ಳುವ ಮೊದಲು ಎನ್‌ಬಿಎಫ್‌ಸಿ ಉದ್ಯೋಗಿ/ಕಂಪನಿಯ ದೃಢೀಕರಣವನ್ನು ಯಾವಾಗಲೂ ಪರಿಶೀಲಿಸಬೇಕೆಂದು ಎಚ್‌ಡಿಎಫ್‌ಸಿ ಬ್ಯಾಂಕ್ ಗ್ರಾಹಕರಿಗೆ ಶಿಫಾರಸು ಮಾಡುತ್ತದೆ.
- ಗುರುತು ಕದಿಯುವ ಕ್ರಿಯೆ ತಪ್ಪಿಸಲು ನಿಮ್ಮ ಗುರುತಿನ ಕಾರ್ಡ್‌ಗಳನ್ನು ಯಾವಾಗಲೂ ಸುರಕ್ಷಿತವಾಗಿರಿಸಿ.

## ಆಧಾರ್ ಒಟಿಪಿ ರಾಜಿ ಮಾಡಿಕೊಳ್ಳಬಹುದು

### ವಂಚನೆಗಳು



- ಆಧಾರ್ ಆಧಾರಿತ ಒಟಿಪಿ ಯೊಂದಿಗೆ ಡಿಜಿಟಲ್ ಖಾತೆಗಳನ್ನು ತೆರೆಯಬಹುದು.
- ಗ್ರಾಹಕರು ತಮ್ಮ ಯುಐಡಿಎಐ ಒಟಿಪಿಯನ್ನು ಥರ್ಡ್ ಪಾರ್ಟಿ ವೆಂಡರ್‌ಗಳೊಂದಿಗೆ ಹಂಚಿಕೊಳ್ಳುವ ವಿವಿಧ ನಿದರ್ಶನಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. ಆದ್ದರಿಂದ ಮೋಸಗಾರರಿಗೆ ಅಂಥ ಖಾತೆಗಳನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ.

### ಭದ್ರತಾ ಸೂಚನೆಗಳು



- ನೆನಪಿಡಿ, ನಿಮ್ಮ ಆಧಾರ್ ಒಟಿಪಿಯನ್ನು ಪರಿಶೀಲಿಸದ ಸಂಸ್ಥೆಗಳೊಂದಿಗೆ ಎಂದೂ ಹಂಚಿಕೊಳ್ಳಬೇಡಿ.
- ಯಾವುದೇ ಮಾಹಿತಿ ಹಂಚಿಕೊಳ್ಳುವ ಮೊದಲು ಯಾವಾಗಲೂ ವ್ಯಕ್ತಿಯ ಗುರುತನ್ನು ಪರಿಶೀಲಿಸಿ.

ಎಚ್ ಡಿ ಎಫ್ ಸಿ ಬ್ಯಾಂಕ್

INDIA'S No.1* BANK

SECURE BANKING

For more details,
visit HDFC Bank's Secure Banking Page
https://www.hdfcbank.com/personal/useful-links/security

*ರಿಟೇಲ್ ಲೋನ್ ಬುಕ್ ಸೈಜ್ ಮೇಲೆ ಆಧಾರಿತ (ಮಾರ್ಗೆಜಸ್ ಹೊರತಾಗಿ).

ಸೋರ್ಸ್: ಆರ್ಥಿಕ ವರ್ಷ 19-20ರ ವಾರ್ಷಿಕ ರಿಪೋರ್ಟ್ಸ್. ಮಾರುಕಟ್ಟೆ ಬಂಡವಾಳೀಕರಣದಲ್ಲಿ ನಂ. 1, 31 ಡಿಸೆಂಬರ್ 2020ರ BSE ಡೇಟಾದ ಅನುಸಾರ.